ಅ) ರಾಜ್ಯದಲ್ಲಿನ ಜಿಲ್ಲೆಗಳ ಪುನರ್‌ವಿಂಗಡಣೆ ಕುರಿತು ವರದಿ ನೀಡಲು ಎಷ್ಟು ಸಮಿತಿಗಳನ್ನು ಸರ್ಕಾರದವರು ರಚಿಸಿದ್ದಾರೆ. (ವಿವರಗಳನ್ನು ನೀಡುವುದು).

ಆ) ಆಡಳಿತ ಸುಧಾರಣೆಗಾಗಿ ಜಿಲ್ಲೆಗಳ ಸಂಖ್ಯೆಯನ್ನು ಹೆಚ್ಚಿಸುವ ಬಗ್ಗೆ ಸಮಿತಿಗಳು ನೀಡಿರುವ ತೀರ್ಮಾನಗಳೇನು?

ಇ) ಸಮಿತಿಗಳ ತೀರ್ಮಾನದ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):-

ಅ) 1. ಶ್ರೀ ಎಂ. ವಾಸುದೇವ ರಾವ್ ಸಮಿತಿ.

2. ಶ್ರೀ ಎಂ. ಹುಂಡೇಕರ್ ಸಮಿತಿ.

3. ಶ್ರೀ ಪಿ. ಸಿ. ಗದ್ದೀಗೌಡರ್ ಸಮಿತಿ.

ಆ) ಕೆಲವು ಹೊಸ ಜಿಲ್ಲೆ, ಉಪ- ವಿಭಾಗಗಳು ಹಾಗೂ ತಾಲ್ಲೂಕುಗಳನ್ನು ಸೃಜಿಸುವಂತೆ ಎಲ್ಲಾ ಸಮಿತಿಗಳು ಶಿಫಾರಸ್ಸು ಮಾಡಿವೆ.

ಇ) ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ:- ಕೋರಮಂಗಲದ ಕ್ರೀಡಾಗ್ರಾಮದ ಗೃಹಗಳ ನಿರ್ಮಾಣ ಕಾರ್ಯ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 255 (517)

ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ):- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕೋರಮಂಗಲದ ಕ್ರೀಡಾಗ್ರಾಮದ ಗೃಹಗಳ ನಿರ್ಮಾಣ ಕಾರ್ಯವು ಯಾವಾಗ ಪ್ರಾರಂಭವಾಗಿರುತ್ತದೆ. ಈಗ ಯಾವ ಹಂತದಲ್ಲಿದೆ ಹಾಗೂ ಯಾವಾಗ ಪೂರ್ಣಗೊಳ್ಳಬೇಕಿತ್ತು.

ಆ) ನಿಗದಿತ ವೇಳೆಯಲ್ಲಿ ನಿರ್ಮಾಣ ಕಾರ್ಯ ಪೂರೈಸದ ಗುತ್ತಿಗೆದಾರರ ಮೇಲೆ ಸರ್ಕಾರದವರು ಕೈಕೊಳ್ಳಲಿರುವ ಕ್ರಮ ಏನು?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು):-

ಅ) ಕೋರಮಂಗಲದ ಕ್ರೀಡಾಗ್ರಾಮದ ಗೃಹ ನಿರ್ಮಾಣ ಯೋಜನೆಯಡಿಯಲ್ಲಿ ಒಟ್ಟು 2534 ಫ್ಲ್ಯಾಟುಗಳನ್ನು 2 ಹಂತಗಳು ಕಟ್ಟಬೇಕಾಗಿರುತ್ತದೆ.

ಮೊದಲನೆ ಹಂತ - 1406 ಫ್ಲ್ಯಾಟುಗಳು.

ಎರಡನೇ ಹಂತ - 1128 ''

ಮೊದಲನೇ ಹಂತದ ಫ್ಲ್ಯಾಟುಗಳು ದಿನಾಂಕ: 14-12-95 ಪೂರ್ಣಗೊಳ್ಳಬೇಕಿತ್ತು. ಆದರೆ 31-7-96ಕ್ಕೆ ಪೂರ್ಣಗೊಳ್ಳುವ ಸಂಭವವಿದೆ. 2ನೇ ಹಂತದಲ್ಲಿನ ಫ್ಲ್ಯಾಟುಗಳು ಡಿಸೆಂಬರ್ 96 ಅಂತ್ಯಕ್ಕೆ ಪೂರ್ಣಗೊಳ್ಳುವುದು.

ಆ) ಒಪ್ಪಂದದ ಪ್ರಕಾರ ಕೆಲಸಗಳು ಪೂರ್ಣಗೊಳ್ಳದ ಕಾರಣಕ್ಕಾಗಿ ದಿನಕ್ಕೆ ರೂ.50,000ರಂತೆ ಈಗಾಗಲೇ ರೂ.3.95 ಕೋಟಿಗಳನ್ನು ಗುತ್ತಿಗೆದಾರರುಗಳಿಂದ ವಸೂಲಿ ಮಾಡಲಾಗಿದೆ.

ವಿಷಯ:- ಬೆಂಗಳೂರಿನ ಅಗ್ರಹಾರ ದಾಸರ ಹಳ್ಳಿಯಲ್ಲಿ ಕರ್ನಾಟಕ ಗೃಹಮಂಡಳಿ ನಿರ್ಮಿಸಿರುವ ಮನೆಗಳ ವಿವರ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 256 (650)

ಶ್ರೀ ಸುರೇಶ್‌ಕುಮಾರ್ (ರಾಜಾಜಿನಗರ):- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬೆಂಗಳೂರು ನಗರದ ಅಗ್ರಹಾರ ದಾಸರಹಳ್ಳಿಯಲ್ಲಿರುವ ಕೆಹೆಚ್‌ಬಿ ಕಾಲೋನಿಯಲ್ಲಿ ಗೃಹ ಮಂಡಳಿಯವತಿಯಿಂದ ಯಾವಾಗ ಮನೆಗಳನ್ನು ನಿರ್ಮಿಸಲಾಯಿತು?

ಆ) ಹಾಗಿದ್ದಲ್ಲಿ ಎಷ್ಟು ಮನೆಗಳನ್ನು ಎಷ್ಟು ಶ್ರೇಣಿಗಳಲ್ಲಿ ಕಟ್ಟಲಾಗಿದೆ.

ಇ) ಜಾಹಿರಾತು ಮಾಡಿದಾಗ ಹಾಗೂ ಮನೆಗಳನ್ನು ಸ್ವಾಧೀನವಹಿಸಿದ ಮೇಲೆ ಹಾಗೂ ಮಾಹಿದೆ ತೀರಿದ ನಂತರ ಶುದ್ಧಕ್ರಯ ಪತ್ರ ಮಾಡಿಕೊಳ್ಳುವ ಸಮಯದಲ್ಲಿ ಮನೆಗಳ ಬೆಲೆ ಹೆಚ್ಚಿಸಿ ಹಂಚಿಕೆದಾರರಿಗೆ ಸಂಕಷ್ಟ ಹೇರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಗೃಹ ಮಂಡಳಿಯವರು ಮನೆ ಮಂಜೂರಾತಿಯನ್ನು ವರಮಾನದ ಆಧಾರದ ಮೇಲೆ ಹಂಚಿ 10-15 ವರ್ಷಗಳ ನಂತರ ಯಾವ ಆಧಾರದ ಮೆಲೆ ಮನೆಗಳ ಬೆಲೆಗಳನ್ನು ಶೇಕಡ 200ರಿಂದ 300ರಷ್ಟು ಹೆಚ್ಚಿಸಿರುವುದು.

ಉ) ಅಗ್ರಹಾರ ದಾಸರಹಳ್ಳಿಯಲ್ಲಿರುವ ಕೆಹೆಚ್‌ಬಿ ಕಾಲೋನಿಯಲ್ಲಿ ನಕಾಸೆಯಲ್ಲಿ ನಮೂದಿಸಿರುವ ಅನೇಕ ಸಾರ್ವಜನಿಕ ಉಪಯೋಗಿ ನಿವೇಶನಗಳನ್ನು ಮಂಡಳಿಯವರು ಹೆಚ್ಚಿನ ಬೆಲೆಗಳಿಗೆ ಮಾರಿರುವ ಸಂಗತಿ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು):-

ಅ) 1976-77 ಮತ್ತು 1980-81ರಲ್ಲಿ ಎರಡು ಹಂತಗಳಲ್ಲಿ ನಿರ್ಮಿಸಲಾಯಿತು.

ಆ)

| ವರ್ಗ | 1ನೇ ಹಂತ | 2ನೇ ಹಂತ | ಒಟ್ಟು |
|---|---|---|---|
| ಇಡಬ್ಲ್ಯೂಎಸ್ | 175 | 475 | 650 |